ಅಡ್ಡ ಮಲಗಿದ ದೀಪದ ಕಂಬವನ್ನು ಅಳೆಯುತ್ತ ಉದ್ದಕ್ಕೂ ಹೆಜ್ಜೆ ಹಾಕಿದೆ. ಅದನ್ನು ಹಿಂದಕ್ಕೆ ತಳ್ಳಲು ಜಾಗ ಬೇಕಾದಷ್ಟು ಇತ್ತು. ಇನ್ನೂ ಐದು ಮೀಟರ್ ಎಳೆದು ಇಡಬಹುದಿತ್ತು. ಹಾಗೆ ಎಳೆಯಲು ಬೇಕಾದ ಹತ್ತಿಪ್ಪತ್ತು ಜನರನ್ನು ಎಲ್ಲಿಂದ ತರೋಣ ಈ ಜನಸಾಗರದಲ್ಲಿ? ಆನೆಗಳೂ ಇಲ್ಲ. ಮೈಸೂರಿನ ದಸರಾ ಮುಗಿಸಿ ಹಾಗೆಯೇ ದುಬಾರೆಗೆ ಹೊರಟು ಹೋಗಿವೆ.

ಭರತೇಶ ವೈಭವದ 'ಕಿರುಬೆರಳ ಸಟೆ' ನೆನಪಾಯಿತು. ಭರತ ಚಕ್ರವರ್ತಿಯ ಶೌರ್ಯವನ್ನು ಬಣ್ಣಿಸಲು ಜೈನ ಕವಿ ರತ್ನಾಕರವರ್ಣಿ 'ಕಿರುಬೆರಳ ಸಟೆ' ಎಂಬ ಪದ್ಯೋಧ್ಯಾಯವನ್ನು ಬರೆದಿದ್ದಾನೆ. ಭರತ ತನ್ನ ಕಿರುಬೆರಳನ್ನು ಮಡಚಿ ಹಿಡಿದಿದ್ದಾನೆ. ಅದನ್ನು


ಅಪಾಯಕಾರಿ ಕಂಬ ತೆರವುಗೊಳಿಸಿ

ಪಾದಚಾರಿ ಮಾರ್ಗದಲ್ಲಿರಿಸಿರುವ ಬೃಹತ್ ಕಂಬ

ನಗರದ ಮಂತ್ರಿ ಮಾಲ್ ಮೆಟ್ರೊ ರೈಲು ನಿಲ್ದಾಣದ ಹೊರ ದ್ವಾರದ ಪಕ್ಕದಲ್ಲಿರುವ (ಮೆಜೆಸ್ಟಿಕ್‌ಗೆ ಹೋಗುವ ಮಾರ್ಗದ) ಪಾದಚಾರಿ ಮಾರ್ಗದ ಮೇಲೆ ಬೀದಿ ದೀಪ ಅಳವಡಿಸುವುದಕ್ಕಾಗಿ ತಂದಿರುವ ಬೃಹತ್

ನೇರ ಮಾಡಿರೆಂದು ತನ್ನದೇ ಸೈನಿಕರಿಗೆ ಸವಾಲು ಹಾಕಿದ್ದಾನೆ. ಸೈನಿಕರು ಬಂಗಾರದ ಸರಪಳಿಯನ್ನು ಚಕ್ರವರ್ತಿಯ ಆ ಬೆರಳಿಗೆ ಕಟ್ಟಿ ಜಗ್ಗುತ್ತಾರೆ. ಸೋತು, ಹತ್ತಾರೆಂಟು ಆನೆಗಳಿಂದ ಸರಪಳಿಯನ್ನು ಎಳೆಸುತ್ತಾರೆ. ಬೆರಳು ಮಿಸುಕುವುದಿಲ್ಲ. ಅಂಥ ಚಕ್ರವರ್ತಿ ಇಂದು ಇಲ್ಲೆಲ್ಲಾದರೂ ಸಿಗುತ್ತಾರೆಯೇ ನೋಡಿದೆ. ಟ್ರಾಫಿಕ್‌ನಲ್ಲಿ ಸಾವಿರಗಟ್ಟಲೆ ಚಕ್ರಗಳು ಉರುಳುತ್ತಿವೆ ನಿಜ, ಆದರೆ ಚಕ್ರವರ್ತಿಗಳೆಲ್ಲಿ?

ಮನೆಗೆ ಹಿಂದಿರುಗುತ್ತೇನೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವೆಬ್‌ಸೈಟ್‌ಗೆ ಈ ಫೋಟೊಗಳನ್ನು ಹಾಕಿ ದೂರು ಕೊಡೋಣ ಎಂದರೆ ಮತ್ತೆ ಒಟಿಪಿ ರಗಳೆ. ಯಾರೂ ತನ್ನ ಬಳಿ ಬರಬಾರದೆಂದೇ ಅದು ಒಟಿಪಿ ಎಂಬ ಪೀಕಲಾಟವನ್ನು ಒಡ್ಡಿದಂತಿದೆ. ಅದರ ವಿರುದ್ಧ ದೂರು ಕೊಡುವುದಾದರೆ ಹೇಗೆ? ಮತ್ತೆ ತಲೆಬಿಸಿ. ಮನೆಗೆ ಬರುವ ಪತ್ರಿಕಾ ಮಿತ್ರರಲ್ಲಿ ಒಂದಿಬ್ಬರಿಗೆ ಈ ಚಿತ್ರವನ್ನು ತೋರಿಸುತ್ತೇನೆ. 'ಎಂಥಾ ಅಧ್ವಾನ ಸರ್! ಇದನ್ನು ನ್ಯೂಸ್ ಐಟಮ್ ಮಾಡಿ ಹಾಕಬೇಕು ಸರ್!' ಎಂದು ಅವರಲ್ಲೊಬ್ಬ ಉದ್ಗರಿಸುತ್ತಾನೆ.

ದಿನವೂ ಲಕ್ಷಾಂತರ ಜನರು ಓಡಾಡುವ ರಸ್ತೆಯಲ್ಲಿ ಈ ಉದ್ದಾನುದ್ದ ದೀಪದ ಕಂಬ ಮಲಗಿರುವ ಜಾಗದ ಲೊಕೇಶನ್ ಪಡೆದು ಚಿತ್ರದೊಂದಿಗೆ ಆತ ಹೋಗುತ್ತಾನೆ. ಎರಡು ವಾರ ಬಿಟ್ಟು (5 ಅಕ್ಟೋಬರ್) ಮತ್ತೆ ನೋಡಿದರೆ ಕಂಬ ಅಲ್ಲೇ ಇದೆ! ಬಿಬಿಎಂಪಿ ವೆಬ್‌ಸೈಟ್ ಈಗಲೂ ಜಡವಾಗಿದೆ. ಬೆಸ್ಕಾಮ್‌ನವರ 'ಜನಸ್ನೇಹಿ' ಜಾಲತಾಣದಲ್ಲಿ ಚಿತ್ರಗಳನ್ನು ಹಾಕಲು ವ್ಯವಸ್ಥೆಯೇ ಇಲ್ಲ. 'ಪ್ರಜಾವಾಣಿ'ಯ ಪತ್ರಕರ್ತ ಗೆಳೆಯರೊಬ್ಬರಿಗೆ ಫೋಟೊವನ್ನು ರವಾನಿಸಿದೆ. ಅವರಿಂದ ಸಲಹೆ ಬಂತು. ಸೋಮವಾರದ ಸಂಚಿಕೆಯ 'ಜನದನಿ' ಅಂಕಣದಲ್ಲಿ ಹಾಕೋಣ, ಕೆಲವೊಮ್ಮೆ ತುರ್ತಾಗಿ ಕೆಲಸ ಆಗುತ್ತದೆ' ಎಂದರು.

ಅಕ್ಟೋಬರ್ 14ರಂದು ಅದು ಪ್ರಕಟವೂ ಆಯಿತು. ಅದು ಫಲಕಾರಿ ಆಗುವ ಬಗ್ಗೆ ಸಂಶಯ ಇತ್ತು. ಹಿಂದೊಮ್ಮೆ ಅದೇ ಅಂಕಣಕ್ಕೆ ನಮ್ಮ ಕೆಂಗೇರಿಯ ಶಿರ್ಕೆ ಬಸ್ ಸ್ಟಾಪಿನ ಅಧ್ವಾನದ ಬಗ್ಗೆ ಕಳಿಸಿದ್ದ ಚಿತ್ರ ಪ್ರಕಟವಾಗಿತ್ತು. ಅಲ್ಲಿಟ್ಟಿದ್ದ ಬೆಂಚ್ ಅರ್ಧ ನೆಲಕ್ಕೆ ಕುಸಿದು ಬಿದ್ದಿತ್ತು. ಇನ್ನರ್ಧವನ್ನು ಯಾರೋ ಕದ್ದೊಯ್ದಿದ್ದರು. ಆ ಚಿತ್ರ ಪ್ರಕಟವಾಗಿ ನಾಲ್ಕು ತಿಂಗಳಾದರೂ ಆ ಬೆಂಚ್ ನೆಲ ಬಿಟ್ಟು ಅರ್ಧ ಮೀಟರ್ ಕೂಡ ಮೇಲೇರಿಲ್ಲ. ಹಿರಿಯರು, ಬೆನ್ನುಹೊರೆ ಹೊತ್ತ ವಿದ್ಯಾರ್ಥಿಗಳು ಈಗಲೂ ಕೂರಲು ಬೆಂಚ್ ಇಲ್ಲದೆ ನಿಂತೇ ಬಸ್ ನಿರೀಕ್ಷೆ ಮಾಡುತ್ತಿರುತ್ತಾರೆ. ನನಗೇನೂ ಈ 'ಜನದನಿ'ಯ ಬಗ್ಗೆ ಹೆಚ್ಚಿನ ನಿರೀಕ್ಷೆ ಇರಲಿಲ್ಲ.

ಆದರೆ ನೋಡಿ ಮ್ಯಾಜಿಕ್! ಮಂತ್ರಿ ಮಾಲ್ ಬಳಿ ಮಲಗಿದ್ದ ದೀಪದ ಕಂಬ ಈಗ ಮಗ್ಗಲು ಬದಲಾಯಿಸಿ ಪಕ್ಕಕ್ಕೆ ಹೊರಳಿತ್ತು. ಅದು ತಾನು ಮಲಗಿದಲ್ಲಿಂದ ಎರಡೇ ಮೀಟರ್ ದೂರ ಸರಿದು (ಟ್ರಾಫಿಕ್ಕಿಗೆ ತೊಂದರೆ ಆಗದಂತೆ) ಪವಡಿಸಿ ಪವಾಡವನ್ನೇ ಸೃಷ್ಟಿಸಿತ್ತು.

ಇದು 'ಪ್ರಜಾವಾಣಿ'ಯ ಪವಾಡವೇ ಇರಬೇಕು. ಬಿಬಿಎಂಪಿ, ಅಥವಾ ಬೆಸ್ಕಾಮ್‌ನ